ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |
|---|

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸೆಷನ್ಸ್ ಕೇಸ್ ನಂಬರ್ : 214/2021**

**ಫ್ರಾಸಾ- 9 ಚಾಸಾ- 8**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪ್ರಕಾಶ್ |
| ತಂದೆಯ ಹೆಸರುಃ | : | ಹರಿರಾಂ |
| ವಯಸ್ಸುಃ | : | 28 ವರ್ಷ |
| ಉದ್ಯೋಗಃ | : | ಬಟ್ಟೆ ಅಂಗಡಿಯಲ್ಲಿ ಕೆಲಸ |
| ವಾಸ | : | ರಾಜಾಸ್ತಾನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 24-07-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನಾನು 4-5 ವರ್ಷಗಳ ಹಿಂದೆ ಶಾಂತಿಗ್ರಾಮದಲ್ಲಿ ಬಟ್ಟೆ ಅಂಗಡಿ ನಡೆಸುತ್ತಿದ್ದೆನು, ನಾನು ಯಾವತ್ತೂ ಅಕ್ಕಸಾಲಿಗರ ಕೆಲಸ ಮಾಡಿಲ್ಲ. ನನ್ನನ್ನು ಪೊಲೀಸರು ಯಾವುದೇ ಚಿನ್ನವನ್ನು ತೂಕ ಮಾಡಿ ಅಂದಾಜು ಬೆಲೆ ನಿಗಧಿಪಡಿಸಲು ಕರೆಸಿಲ್ಲ. ನಿಪಿ-7ರಲ್ಲಿ ನನ್ನ ರುಜು ಇದೆ. ನಿಪಿ-7(ಬಿ) ಎಂದು ಗುರುತಿಸಲಾಯಿತು. ಅದನ್ನು ಶಾಂತಿಗ್ರಾಮದ ಪೊಲೀಸ್ ಠಾಣೆಯಲ್ಲಿ ಹಾಕಿರುತ್ತೇನೆ, ಏತಕ್ಕೆಂದು ಗೊತ್ತಿಲ್ಲ. ಪೊಲೀಸರು ಯಾವತ್ತೂ ನಮ್ಮ ಆಭರಣದ ಅಂಗಡಿಗೆ ಬಂದು ಆಭರಣವನ್ನು ವಶಪಡಿಸಿಕೊಂಡಿಲ್ಲ. ಈಗ ತೋರಿಸಿದ ನಿಪಿ-3ರ ಫೋಟೋದಲ್ಲಿ ಕಂಡುಬರುವ ಸರವನ್ನು ನಾನು ಈ ಹಿಂದೆ ನೋಡಿಲ್ಲ, ಅದನ್ನು ನಾನು ಓರೆಹಚ್ಚಿ ಅದರ ಅಂದಾಜು ಬೆಲೆಯನ್ನು ಪೊಲೀಸರಿಗೆ ಹೇಳಿಲ್ಲ. ಅದನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ. ಈ ಸಹಿ ಹಾಕುವಾಗ ಆರೋಪಿ ದರ್ಶನ್ ಎಂಬುವವರು ಪೊಲೀಸರ ವಶದಲ್ಲಿ ಇರಲಿಲ್ಲ. (ಆರೋಪಿತರು ಗೈರುಹಾಜರಿದ್ದು ಅವರ ಪರ ವಕೀಲರು ಆತನ ಗುರುತಿನ ಬಗ್ಗೆ ತಕಾರಾರಿಲ್ಲವೆಂದು ಹೇಳುತ್ತಾರೆ) ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿನಾಂಕ 7-1-19ರಂದು ಹಾಸನ ಗ್ರಾಮಾಂತರ ವೃತ್ತನಿರೀಕ್ಷಕರು ನನ್ನನ್ನು ಬೆಳಿಗ್ಗೆ 10ಗಂಟೆಗೆ ಠಾಣೆಗೆ ಕರೆಸಿದಾಗ ಪೊಲೀಸರ ವಶದಲ್ಲಿ ಈ ಪ್ರಕರಣದ ಆರೋಪಿ ದರ್ಶನ್ ಇದ್ದನು ಎಂದರೆ ಸರಿಯಲ್ಲ. ಸದರಿ ಆರೋಪಿತರು ದಿನಾಂಕ 27-12-18ರಂದು ತಾನು ಗಾಡೇನಹಳ್ಳಿ ಕ್ರಾಸ್ ಹತ್ತಿರ ಮೋಟಾರ್ ಬೈಕ್ ನಲ್ಲಿ ಹೋಗುತ್ತಿದ್ದವರಿಂದ ದೋಚಿದ್ದ ಚಿನ್ನದ ಸರವನ್ನು ತನ್ನ ಮನೆಯಲ್ಲಿ ಇಟ್ಟಿರುವುದಾಗಿ ಹೇಳಿ ಚನ್ನಪಟ್ಟಣದಲ್ಲಿ ತಾನು ಬಾಡಿಗೆಗೆ ವಾಸವಿದ್ದ ಮಂಜಪ್ಪ ಎನ್ನುವವರ ಮನೆಗೆ ಕರೆದುಕೊಂಡು ಹೋದನುಎಂದರೆ ಸರಿಯಲ್ಲ. ಅಲ್ಲಿ ಹಾಲ್ ನನಲ್ಲಿದ್ದ ಟಿವಿ ಹಿಂಭಾಗದಿಂದ ಒಂದು ಪ್ಲಾಸ್ಟಿಕ್ ಗಂಟನ್ನು ತೆರೆದು ಅದರಲ್ಲಿದ್ದ ನಿಪಿ-3 ರಲ್ಲಿ ಕಂಡುಬರುವ 2 ಚಿನ್ನದ ಸರಗಳನ್ನು ತೆಗೆದು ಹಾಜರುಪಡಿಸಿದ್ದನ್ನು ಪೊಲೀಸರು ವಶಕ್ಕೆ ಪಡೆದರು ಎಂದರೆ ಸರಿಯಲ್ಲ. ಅದನು ನನಗೆ ಒರೆ ಹಚ್ಚಲು ಹೇಳಿದಾಗ ನಾನು ಅದನ್ನು ಒರೆಹಚ್ಚಿ ಅದರ ಒಟ್ಟು ತೂಕ 30.79 ಗ್ರಾಂ ಎಂದು ಅವುಗಳ ಅಂದಾಜು ಬೆಲೆ 90ಸಾವಿರ ಎಂದು ತಿಳಿಸಿದೆನು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ-7ರಂತೆ ಮಾಡಿದ ಮಹಜರಿಗೆ ನಿಪಿ-7(ಬಿ) ರಂತೆ ಸಹಿ ಹಾಕಿರುತ್ತೇನೆ ಹಾಗೂ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-14 ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲವೆಂದು ಹೇಳುತ್ತಾರೆ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**